# ಕಡೆಯ ಆಟದ ಆತಂಕ

ಉದ್ಯಮವಾಗಿ ಗುರ್ತಿಸಿಕೊಂಡಿರುವ ಚಲನಚಿತ್ರಕ್ಕೆ ಸರ್ಕಾರಗಳು ಪ್ರಶಸ್ತಿ – ಸಹಾಯಧನ ನೀಡಿ ಗೌರವಿಸುತ್ತವೆ. ಜನರು ಕೂಡ ಸಿನಿಮಾಗಳನ್ನು ಕಲೆಯ ರೂಪದಲ್ಲಿ ಆನಂದಿಸುತ್ತಾರೆ, ಬೆಂಬಲಿಸುತ್ತಾರೆ. ಈ ಪ್ರೋತ್ಸಾಹ ಸರ್ಕಸ್ ಕಂಪೆನಿಗಳಿಗೆ ಕೂಡ ಸಲ್ಲಬೇಕಿದೆ.

ಕರ್ನಾಟಕದ ಏಕೈಕ ಸರ್ಕಸ್ ಕಂಪೆನಿ ಎನ್ನುವ ವಿಶೇಷಣದ 'ಗ್ರೇಟ್ ಪ್ರಭಾತ್' ಸಂಸ್ಥೆ ಮುಂದಿನ ತಿಂಗಳು ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಿದೆ. ಸುಮಾರು ಏಳು ದಶಕಗಳಿಂದ ನಾಡಿನ ಜನರನ್ನು ರಂಜಿಸುತ್ತಾ ಊರು ಸುತ್ತುತ್ತಿದ್ದ ಕಂಪೆನಿಯನ್ನು, ಮುಂದಿನ ತಿಂಗಳ ಬೆಳಗಾವಿ ಕ್ಯಾಂಪ್ ನಂತರ ಮುಚ್ಚುವುದಾಗಿ ಅದರ ಮಾಲೀಕರಾದ ಸಾಯಿಬಾಬಾ ತಿಳಿಸಿದ್ದಾರೆ. 'ಜನರು ಸರ್ಕಸ್ ನೋಡಲು ಅಷ್ಟಾಗಿ ಬರುತ್ತಿಲ್ಲ. ಹೀಗಾಗಿ, ಕಂಪೆನಿಯನ್ನು ಮುಚ್ಚುವ ಅನಿವಾರ್ಯತೆ ಬಂದಿದೆ' ಎನ್ನುವ ಅವರ ಮಾತೇ ಎಲ್ಲ ಕಥೆಯನ್ನೂ ಹೇಳುವಂತಿದೆ. ಅಲ್ಲಿಗೆ ಕರ್ನಾಟಕದಲ್ಲಿನ ಸರ್ಕಸ್ ಇತಿಹಾಸದ ವರ್ಣರಂಜಿತ ಅಧ್ಯಾಯವೊಂದು ಕೊನೆಗೊಳ್ಳುವ ದಿನ ಸನ್ನಿಹಿತವಾಗಿದೆ.

ಎರಡು ಮೂರು ದಶಕಗಳ ಹಿಂದಷ್ಟೇ ಸರ್ಕಸ್ ಕಂಪೆನಿಗಳು ಸಾಕಷ್ಟು ಉತ್ಸಾಹದಿಂದಲೇ ದೇಶಸಂಚಾರ ನಡೆಸುತ್ತಿದ್ದವು. ಆದರೆ, ಜಗತ್ತು ಹೆಚ್ಚು ನಾಜೂಕಾದಂತೆ ಈ ಸಂಸ್ಥೆಗಳ ಸಂಕಷ್ಟಗಳೂ ಹೆಚ್ಚುತ್ತಾ ಹೋದವು. ಕಲಾವಿದರ ಕೊರತೆ, ವನ್ಯಮೃಗಗಳ ಬಳಕೆಗೆ ನಿರ್ಬಂಧಗಳು, ನಗರಗಳಲ್ಲಿ ಡೇರೆ ಹಾಕಲು ಬೇಕಾದ ವಿಶಾಲವಾದ ಜಾಗದ ಕೊರತೆ, ಪರವಾನಗಿ ದೊರಕಿಸಿಕೊಳ್ಳುವ ಪಡಿಪಾಟಲು, ದುಬಾರಿ ಸಾರಿಗೆ ವ್ಯವಸ್ಥೆ – ಹೀಗೆ, ಕಂಪನಿಯ ನಿರ್ವಹಣೆ ಮಾಲೀಕರ ಪಾಲಿಗೆ ದೊಡ್ಡ ಹೊರೆಯಾಗಿ– ಕಸರತ್ತಾಗಿ ಪರಿಣಮಿಸಿತು. 1981ರಲ್ಲಿ 'ವೀನಸ್ ಸರ್ಕಸ್' ಪ್ರದರ್ಶನದ ಸಂದರ್ಭದಲ್ಲಿ ಉಂಟಾದ ಅಗ್ನಿ ಆಕಸ್ಮಿಕದಲ್ಲಿ 92 ಜನರು ಸಾವಿಗೀಡಾದ ದುರ್ಘಟನೆಯ ನಂತರವಂತೂ ಸುರಕ್ಷತೆಗೆ ಸಂಬಂಧಿಸಿದಂತೆ ಕಂಪೆನಿಗಳನ್ನು ಅನುಮಾನದಿಂದ ನೋಡುವ ಧೋರಣೆಯೂ ಶುರುವಾಯಿತು. ಇದರ ಪರಿಣಾಮವಾಗಿ ಒಂದೊಂದೇ ಸರ್ಕಸ್ ಕಂಪನಿಗಳು ಬಾಗಿಲು ಮುಚ್ಚುತ್ತಾ ಬಂದವು. ಉಳಿದಿರುವ ಸಂಸ್ಥೆಗಳ ಪರಿಸ್ಥಿತಿ ಕೂಡ ಚೇತೋಹಾರಿಯಾಗಿಲ್ಲ. ಜೆಮಿನಿ, ಜಂಬೊ, ಒಲಿಂಪಿಕ್, ರೇನ್ ಬೋಗಳಂಥ ಕೆಲವು ಸಂಸ್ಥೆಗಳಷ್ಟೇ ಗತವೈಭವದ ಪ್ರತಿನಿಧಿಗಳು ಎನ್ನುವಂತೆ ಈಗ ಆಟ ಮುಂದುವರಿಸುತ್ತಿವೆ.

ಸರ್ಕಸ್ ಕಂಪೆನಿಗಳ ಸಂಕಟ ಕರ್ನಾಟಕಕ್ಕೆ ಅಥವಾ ಭಾರತಕ್ಕೆ ಸೀಮಿತವಾದ ವಿದ್ಯಮಾನವಲ್ಲ. ವಿಶ್ವದ ಬೇರೆ ಕಡೆಗಳಲ್ಲೂ ಜನ ಸರ್ಕಸ್ ಪ್ರದರ್ಶನಗಳಿಗೆ ಬೆನ್ನುಹಾಕಿದ್ದಾರೆ. ಯುರೋಪ್‌ನ ಅನೇಕ ದೇಶಗಳು ವನ್ಯಮೃಗಗಳ ಪ್ರದರ್ಶನವನ್ನು ನಿರ್ಬಂಧಿಸಿವೆ. ಯಾವಾಗ, ಹುಲಿ ಸಿಂಹ ಆನೆಗಳು ಕಂಪೆನಿಗಳ ಡೇರೆಗಳಿಂದ ಮಾಯವಾಗತೊಡಗಿದವೋ ಪ್ರೇಕ್ಷಕರು ಕೂಡ ಸರ್ಕಸ್ ಬಗ್ಗೆ ಆಸಕ್ತಿ ಕಳೆದುಕೊಳ್ಳತೊಡಗಿದರು. ಪ್ರಾಣಿಗಳನ್ನು ನೋಡಲು ಹಾತೊರೆಯುತ್ತಿದ್ದ ಚಿಣ್ಣರ ಪಾಲಿಗೆ, ವನ್ಯಮೃಗಗಳಿಲ್ಲದ ಪ್ರದರ್ಶನಗಳು ಸಪ್ಪೆಯಾಗಿ ಕಾಣಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಸಾಹಸಪಟುಗಳ ಕಸರತ್ತುಗಳು ಹಾಗೂ ಜೋಕರ್‌ಗಳ ಆಕರ್ಷಣೆಯಷ್ಟೇ ಕಂಪೆನಿಗಳಿಗೆ ನೋಡುಗರನ್ನು ಸೆಳೆಯಲು ಸಾಕಾಗುತ್ತಿಲ್ಲ. ಅಲ್ಲದೆ ಮನರಂಜನೆಯ ಮಾಧ್ಯಮವಾಗಿ ಸಿನಿಮಾ ಏಕಸ್ವಾಮ್ಯತೆ ಸಾಧಿಸಿರುವುದು ಕೂಡ ಸರ್ಕಸ್‌ಗೆ ಹಿನ್ನಡೆಯಾಗಿದೆ.

ಸರ್ಕಸ್ ಕಂಪೆನಿಯೊಂದು ಮುಚ್ಚುವ ವಿದ್ಯಮಾನ ಪ್ರಸ್ತುತ ಸಂದರ್ಭದಲ್ಲಿ ತೀರಾ ಅಚ್ಚರಿ ಹುಟ್ಟಿಸುವಂತಹದ್ದೇನಲ್ಲ. ಸಾಹಿತಿ ಕಲಾವಿದರ ಮನೆಗಳು, ರಂಗಮಂದಿರಗಳು, ಚಿತ್ರಮಂದಿರಗಳ ಜೊತೆಗೆ ಕನ್ನಡ ಶಾಲೆಗಳೂ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ 'ಗ್ರೇಟ್ ಪ್ರಭಾತ್' ನಿರ್ಗಮನ ತೀರಾ ಮಹತ್ವದ ಸಂಗತಿ ಅಲ್ಲದಿರಬಹುದು. ಆದರೆ, ಹಲವು ತಲೆಮಾರುಗಳ ಭಾವಕೋಶವಾಗಿದ್ದ ಸಂಗತಿಗಳು ಒಂದೊಂದಾಗಿ ನಮ್ಮಿಂದ ಕಳಚುತ್ತಾಹೋಗುವುದು ಸಣ್ಣ ನಷ್ಟವೇನಲ್ಲ. ಜಂಬೊ, ಜೆಮಿನಿ, ಪ್ರಭಾತ್, ವೀನಸ್ ಇವೆಲ್ಲವೂ ಸರ್ಕಸ್ ಕಂಪನಿಗಳ ಹೆಸರುಗಳಷ್ಟೇ ಆಗಿರದೆ ಒಂದು ತಲೆಮಾರಿನ ರಮ್ಯ ಸಾಹಸ ಕನಸುಗಳ ರೂಪಕಗಳೂ ಆಗಿದ್ದವು ಎನ್ನುವುದನ್ನು ಮರೆಯಬಾರದು. ಕಲೆಯ ರೂಪದಲ್ಲಿ ಸರ್ಕಸ್‌ಗೆ ಸಾಂಸ್ಕೃತಿಕ ಮಹತ್ವವಿದೆ. ಮನುಷ್ಯರು ಹಾಗೂ ಪ್ರಾಣಿಗಳು ಒಟ್ಟಾಗಿ ಒಂದೇ ವೇದಿಕೆಯಲ್ಲಿ ಪ್ರದರ್ಶಿಸುತ್ತಿದ್ದ ಸಾಹಸ, ನಾಟಕ, ವಿನೋದಗಳ ಮೊತ್ತ ಸರ್ಕಸ್ ಎನ್ನುವ ಸಾಮುಯಿಕ ಕಲಾಪ್ರಕಾರ. ಹಾಗಾಗಿ, ಸರ್ಕಸ್ ಕಂಪೆನಿಗಳ ನಿರ್ಗಮನವನ್ನು ಸಾಂಸ್ಕೃತಿಕ ನಷ್ಟದ ದೃಷ್ಟಿಯಿಂದಲೂ ನೋಡಬೇಕಿದೆ.

ಉದ್ಯಮವಾಗಿ ಗುರ್ತಿಸಿಕೊಂಡಿರುವ ಚಲನಚಿತ್ರಕ್ಕೆ ಸರ್ಕಾರಗಳು ಪ್ರಶಸ್ತಿ– ಸಹಾಯಧನ ನೀಡಿ ಗೌರವಿಸುತ್ತವೆ. ಜನರು ಕೂಡ ಸಿನಿಮಾಗಳನ್ನು ಕಲೆಯ ರೂಪದಲ್ಲಿ ಆನಂದಿಸುತ್ತಾರೆ, ಬೆಂಬಲಿಸುತ್ತಾರೆ. ಈ ಪ್ರೋತ್ಸಾಹ ಸರ್ಕಸ್ ಕಂಪೆನಿಗಳಿಗೆ ಕೂಡ ಸಲ್ಲಬೇಕಿದೆ. ಎರಡೂವರೆ ಶತಮಾನಕ್ಕೂ ಹೆಚ್ಚು ಇತಿಹಾಸದ ಕಲಾಪ್ರಕಾರವೊಂದನ್ನು ಪ್ರತಿನಿಧಿಸುತ್ತ, ಕುಟುಕುಜೀವ ಉಳಿಸಿಕೊಂಡಿರುವ ಸಂಸ್ಥೆಗಳಿಗೆ ಅಗತ್ಯ ಸವಲತ್ತುಗಳನ್ನು ಒದಗಿಸಿಕೊಡುವ ಮೂಲಕ ಪರಂಪರೆಯ ಕೊಂಡಿಯೊಂದು ಮುಂದುವರಿಯಲು ಸರ್ಕಾರ ಪ್ರಯತ್ನಿಸಬಹುದು. ಹಾಗೆಯೇ ಸಹೃದಯರು ಕೂಡ ಸರ್ಕಸ್ ಪ್ರದರ್ಶನಗಳನ್ನು ನೋಡುವ ಮೂಲಕ ಅವುಗಳಿಗೆ ಜೀವಜಲವಾಗಿ ಒದಗಿಬರಬೇಕಿದೆ.

■ ರಘುನಾಥ ಚ.ಹ.




ಈಶ್ವರ್